ಅಧ್ಯಕ್ಷರು : ಆಯಿತು ಬಿಡಿ, ನಾಳೆ ಅವರನ್ನು ಕರೆಸಿ.

ಶ್ರೀ ಸಿದ್ದರಾಮಯ್ಯ : ಅದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟರೂ ಆಗುತ್ತದೆ.

ಶ್ರೀ ನೆ.ಲ.ನರೇಂದ್ರ ಬಾಬು : ಈ ರೀತಿಯಾದರೆ ನಾವು ಶಾಸಕರುಗಳು ನಾಳೆ ಚುನಾವಣೆಯಲ್ಲಿ ಮತ ಕೇಳುವುದಕ್ಕೆ ಜನಗಳ ಮುಂದೆ ಹೇಗೆ ಹೋಗುವುದು?

ಶ್ರೀ ಆರ್.ದಿನೇಶ್ ಗುಂಡುರಾವ್ : ಅಧ್ಯಕ್ಷರೆ, ತಾವು ಇದನ್ನು ನಾಳೆಯೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು ಬಿಡಿ. ಪ್ರಕಾಶ್ ಬಿ.ಹುಕ್ಕೇರಿಯವರು ತಾವು ಕೇಳಿ.

(7-10 PM)

VIII) **ವಿಷಯ : ಬೆಳಗಾವಿ ಜಿಲ್ಲೆ ಚಿಕ್ಕೋಡಿ –ಸದಲಗ ಮತಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ಕಾರ್ಯಾಚರಣೆಗೆ 'ಎಕ್ಸ್‌ಪ್ರೆಸ್ ಫೀಡರ್ ಲೈನ್' ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ.**

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಚಿಕ್ಕೋಡಿ–ಸದಲಗ) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಚಿಕ್ಕೋಡಿ–ಸದಲಗ ಮತಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ಕಾರ್ಯಾಚರಣೆಗೆ 'ಎಕ್ಸ್‌ಪ್ರೆಸ್ ಫೀಡರ್ ಲೈನ್' ಕಾಮಗಾರಿಯನ್ನು ಪೂರ್ಣ ಗೊಳಿಸುವ ಬಗ್ಗೆ ಗ್ರಾಮೀಣಾಭಿವೃಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃಧಿ ಮತ್ತು ಪಂ.ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ರಾಜೀವಗಾಂಧಿ ಕುಡಿಯುವ ನೀರಿನ ಯೋಜನೆಯಡಿ ಚಿಕ್ಕೋಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ದಿನಾಂಕ: 18–12–2007 ರಲ್ಲಿ ನಡೆದ SLEC ಸಭೆಯಲ್ಲಿ ಒಟ್ಟು ರೂ.308.00 ಲಕ್ಷ ಅಂದಾಜಿನ 12 ಎಕ್ಸ್‌ಪ್ರೆಸ್ ಫೀಡರ್ ಲೈನ್ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಚಿಕ್ಕೋಡಿ – ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ 6 ಕಾಮಗಾರಿ

ಗಳನ್ನು ರೂ. 180.72 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಂಡು ದಿನಾಂಕ: 28–02–2009ರಲ್ಲಿ ಕೆಲಸ ಪ್ರಾರಂಭಿಸಲಾಗಿದೆ. ಟೆಂಡರ್ ಕರೆಯುವಾಗ HESCOM ರವರು ನಿಗದಿಪಡಿಸಿರುವ ಐಟಂಗಳಂತೆ ಕಾಮಗಾರಿಗಳನ್ನು ಕೈಗೊಳಲಾಗಿದೆ. ತದನಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮುನ್ನ KPTCL ರವರು ಪ್ರತಿಯೊಂದು ಯೋಜನೆಗೂ 11 KV Feeder Breaker ಗಳನ್ನು ಕಡ್ಡಾಯವಾಗಿ ಅಳವಡಿಸಲೇಬೇಕೆಂದು ಸೂಚಿಸಿದಾಗ ಕೆಲವು ಬದಲಾವಣೆ ಗಳನ್ನು ಮಾಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಶಿರಗಾಂವ್, ಕೆರೂರು, ರೂಪಿನಾಳ – ಸಿದ್ಧಾಪುರವಾಡಿ ಹಾಗೂ ಎಕ್ಸಾಂಬಾ ಗ್ರಾಮಗಳ ಎಕ್ಸ್‌ಪ್ರೆಸ್ ಫೀಡರ್‌ಲೈನ್ ಕಾಮಗಾರಿಗಳನ್ನು ಪೂರ್ಣ ಗೊಳಿಸಲಾಗಿದೆ. HESCOM ರವರಿಂದ ಪರಿವೀಕ್ಷಣೆ ಮಾಡಿದ್ದು, ಮಾರ್ಚಿ 2010ರ ಅಂತ್ಯಕ್ಕೆ ಯೋಜನೆ ಕಾರ್ಯಗತವಾಗಲಿದೆ. ಇಂಗಳಿ ಮತ್ತು ಯಡೂರ ಗ್ರಾಮಗಳ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವಾಗ ಕೃಷ್ಣ ನದಿಗೆ ಅಡ್ಡಲಾಗಿ Towerಗಳನ್ನು ನಿರ್ಮಿಸಿ ಕಾಮಗಾರಿ ಕೈಗೊಳ್ಳ ಬೇಕಾಗಿದ್ದು, ಕೆಲಸವು ಸ್ವಲ್ಪಮಟ್ಟಿಗೆ ವಿಳಂಭವಾಗಿದ್ದು, ಜುಲೈ 2010 ರೊಳಗಾಗಿ ಪೂರ್ಣಗೊಳಿಸಲಾಗುವುದು. ಉಳಿದ 2 ಕಾಮಗಾರಿಗಳಾದ ಮಾಂಗೂರ ಹಾಗೂ ಆದಿ ಮತ್ತು ಬೋಳೆವಾಡಿ ಯೋಜನೆಗಳಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಏಪ್ರಿಲ್ 2010 ರೊಳಗೆ ಪೂರ್ಣಗೊಳಿಸಲಾಗುವುದು. ಚಿಕ್ಕೋಡಿ ತಾಲ್ಲೂಕಿನ ಕರೋಶಿ ಗ್ರಾಮದ ಯೋಜನೆಯನ್ನು ಜೈನಾಪುರ ಕುಡಿಯುವ ನೀರಿನ ಯೋಜನೆಯಲ್ಲಿ ಅಳವಡಿಸಲಾಗಿದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, 2008ರಲ್ಲಿ ಆರ್ ಡಿಪಿಆರ್‌ನಿಂದ ಪ್ರತಿ ಗ್ರಾಮಪಂಚಾಯತ್‌ಗೆ ಹಣ ಬಿಡುಗಡೆ ಆಯಿತು. ಅನಂತರ ಗ್ರಾಮ ಪಂಚಾಯತ್‌ನವರು ಕೆಇಬಿಗೆ ಹಣ ಕಟ್ಟಿದ್ದರು. ಹಣ ಕಟ್ಟಿದ ಮೇಲೆ ಟೆಂಡರ್ ಕರೆಯಬೇಕೆಂದು ನಾವು ಕೆಇಬಿರವರಿಗೆ ಹೇಳಿದ್ದೇವೆ. ಆದರೆ, ಏನೊ ಒಂದು ಕುಂಟು ನೆಪ ಹೇಳುತ್ತಾ ಇರುವ ಎಸ್ಟಿಮೇಟ್‌ನ್ನು ಕಡಿಮೆ, ಹೆಚ್ಚು ಮಾಡುತ್ತಾ ಹೋದರು. ಮತ್ತೆ ಇದನ್ನು ಜಿಲ್ಲಾ ಪಂಚಾಯತ್‌ಗೆ ವಹಿಸಿಕೊಟ್ಟರು. ಜಿಲ್ಲಾಪಂಚಾಯತ್ ಮೂಲಕ ಅದಕ್ಕೆ ಟೆಂಡರ್ ಕರೆಯತಕ್ಕಂಥದ್ದನ್ನು ಮಾಡಿದ್ದಾರೆ. ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಲ್ಲಿ 12 ಗ್ರಾಮಗಳನ್ನು ಸೇರಿಸಿಕೊಂಡು ಒಂದು

ಯೋಜನೆ ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗನೆ ಈ ಕಾರ್ಯವನ್ನು ಪೂರ್ಣಗೊಳಿಸಿ ಎಲ್ಲಾ ಗ್ರಾಮಗಳಿಗೆ ಸಮರ್ಪಕವಾಗಿ 24 ಗಂಟೆ ನೀರನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕಳಕಳಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಿಂದೆ ಕಾಮಗಾರಿ ಏಕೆ ತಡವಾಯಿತೆಂಬುದರ ಬಗ್ಗೆ ಮತ್ತು ಹೆಸ್ಕಾಂನವರು ಏನು ಮಾಡಿದ್ದಾರೆಂಬುದನ್ನು ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಮತ್ತೆ ಈಗ ಪ್ರಕಾಶ್ ಹುಕ್ಕೇರಿಯವರು ಸಹ ಅದೇ ವಿಷಯವನ್ನು ಹೇಳಿದ್ದಾರೆ. ಹಿಂದೆ ತಾವೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ ಅಲ್ಲಿ ಏನು ಸಮಸ್ಯೆ ಎಂಬುದು ತಮಗೂ ಸಹ ಗೊತ್ತಿದೆ. ಈಗ ಅವೆಲ್ಲಾ ಸಮಸ್ಯೆಯನ್ನು ಮೀರಿ ಈಗ ಕೆಲಸವನ್ನು ನಾವು ಪ್ರಾರಂಭ ಮಾಡಿದ್ದೇವೆ. ಜುಲೈ 2010 ರೊಳಗಾಗಿ ಇದನ್ನು ಪೂರ್ಣಗೊಳಿಸುತ್ತೇವೆ. ಹಾಗೆಯೇ ಮತ್ತೊಂದು ಕಾಮಗಾರಿ ಏಪ್ರಿಲ್ 2010 ರೊಳಗಾಗಿ ಮುಗಿಸುತ್ತೇವೆ. ತಾವು ಈಗ ಹೇಳಿರುವಂತೆ ಇದಕ್ಕೆ ಹೆಚ್ಚು ಮುತುವರ್ಜಿ ವಹಿಸಿ ಆದಷ್ಟು ಬೇಗನೆ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇನೆ.

IX) ವಿಷಯ : ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯಲ್ಲಿ ನಿವೇಶನ ಹಂಚಿಕೆ ಹಾಗೂ ಇನ್ನಿತರ ವಿಷಯಗಳಲ್ಲಿ ಆಗಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯಲ್ಲಿ ನಿವೇಶನ ಹಂಚಿಕೆ ಹಾಗೂ ಇನ್ನಿತರ ವಿಷಯಗಳಲ್ಲಿ ಆಗಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಬಸವೇಶ್ವರ ನಗರ. :ಕರ್ನಾಟಕ ನಗರ ವಸತಿ ಸೊಸೈಟಿ" ಎಂಬ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960 ರಡಿಯಲ್ಲಿ ನೋಂದಣಿ ಯಾಗಿರುವುದಿಲ್ಲ. ಆದಾಗ್ಯೂ, ಈ ಗಮನ ಸೆಳೆಯುವ ಸೂಚನೆಯಲ್ಲಿ ತಿಳಿಸಿರುವ ಸಹಕಾರಿ ಸಂಘವು ಬೆಂಗಳೂರು